**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂ:**359/2020**

ಸಿ.ಡಬ್ಲ್ಯೂ–೧೧ ಪಿ.ಡಬ್ಲ್ಯೂ-೭

| | | |
|---|---|---|
| ಹೆಸರು | : | ನೀಲಮ್ಮ |
| ತಂದೆ:ಗಂಡ | : | ಭೀಮಶಾ |
| ವಯಸ್ಸು | : | ೫೦ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | : | ಅಂಬಲಗಾ |

ದಿನಾಂಕ:೩೧.೦೫.೨೦೨೩
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ಆರೋಪಿ ಪರಿಚಯ ಇರುವುದಿಲ್ಲ. ಚಾಸಾ-೧, ೫, ೯ ರವರ ಪರಿಚಯ ಇರುತ್ತದೆ. ಚಾಸಾ-೨ ರಿಂದ ೭, ೧೨ ರಿಂದ ೨೨ ರವರ ಪರಿಚಯ ಇರುವುದಿಲ್ಲ. ಚಾಸಾ-೧೦ ನನ್ನ ಮಗಳು. ನನ್ನ ಮೊಮ್ಮಗನಿಗೆ ಕಲಬುರಗಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಮರುಳಿ ಮಹಾಗಾಂವ ಕ್ರಾಸ ಹತ್ತಿರ ಬಂದು ನಿಂತಾಗ ಬಸ್ಸಗಳು ಇರದೆ ಇದ್ದ ಕಾರಣ ಟಂಟಂ ಬಂದಾಗ ಅದರಲ್ಲಿ ನಾವು ಅಂಬಲಗಾ ಕಡೆಗೆ ಹೊರಟೆವು. ನಮ್ಮ ಊರು ೧ ಕಿ.ಮೀ ಇರುವಾಗ ವಾಹನ ಪಲ್ಟಿ ಆಯಿತು ಮುಂದೆನಾಯಿತು ಎಂದು ನನಗೆ ಗೊತ್ತಿಲ್ಲ. ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೊದರು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು : ಸ.ಸ.ಅ. ವಕೀಲರಿಂದ.**

ದಿ:10.02.2020 ರಂದು ಮಧ್ಯಾಹ್ನ 3.45 ಗಂಟೆಗೆ ಸದರಿ ಘಟನೆ ಜರುಗಿತು ಎಂದರೆ ಸರಿ. ಅಂಬಲಗಾ ಕ್ರಾಸ ಕಮಾನಿನಿಂದ ಅಂಬಲಗಾ ಹೊಗುವ ಹಾದಿಯಲ್ಲಿ ಬ್ರಿಜ್ಜ ರಸ್ತೆ ಇಳಿಜಾರಿನಲ್ಲಿ ಆರೋಪಿಯ ಟಂಟಂ ನಂ.ಕೆಎ-32 ಬಿ1889 ರಲ್ಲಿ ಕುಳಿತು ನಾನು ಹೊರಟಿದ್ದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-19 ರವರ ತಾಯಿಯಾದ ರತ್ನಾಬಾಯಿ ಹಾಗೂ ಚಾಸಾ-21 ರವರ ಗಂಡನಾದ ದಾಮು ರವರು ಸದರಿ ಟಂಟಂನಲ್ಲಿ ಇದ್ದರು ಎಂದರೆ ಸಾಕ್ಷಿ ರತ್ನಾಬಾಯಿ ಅಲ್ಲೆ ಮೃತಪಟ್ಟಿರುತ್ತಾರೆ ದಾಮು ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆ ಎಂದು ಹೇಳುತ್ತಾರೆ. ನನ್ನ ಮೊಮ್ಮಗನಾದ ಆದಿತ್ಯ ಸದರಿ ಟಂಟಂನಲ್ಲಿ ಇದ್ದ ಎಂದರೆ ಸರಿ. ಚಾಸಾ-8 ರಿಂದ 10, 12 ರಿಂದ 15 ಹಾಗೂ ನಾನು ಆ ವಾಹನದಲ್ಲಿ ಇದ್ದೆವು ಎಂದರೆ ಸರಿ. ಆರೋಪಿ ಸದರಿ ಟಂಟಂನ್ನು ಅತೀವೇಗವಾಗಿ ನಿಷ್ಕಾಳಜಿತನದಿಂದ ಚಲಾಯಿಸಿ ಟಂಟಂ ಅಪಘಾತ ಪಡಿಸಿ ನಮಗೆ ಗಾಯಗಳು ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ರೀತಿ ಪೊಲೀಸ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ.ಎ.ಕೆ. ವಕೀಲರಿಂದ.**

ಘಟನೆ ನಡೆದ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಅಂಬಲಗಾ ಫೂಲ ಹತ್ತಿರ ಅಪಘಾತ ನಡೆಯಿತು. ಫೂಲಗಿಂತ ಮುಂಚೆ ಅಪಘಾತ ಜರುಗಿತು. ಟಂಟಂನಲ್ಲಿ ನಾನು ಹಿಂಭಾಗದಲ್ಲಿ ಕುಳಿತಿದ್ದೆ ಎಂದರೆ ಸರಿ. ಅಪಘಾತವಾದ ಸ್ಥಳದಲ್ಲಿ ರಸ್ತೆ ತಿರುವು ಇತ್ತು ಎಂದರೆ ಸರಿ. ರಸ್ತೆ ಸರಿ ಇರಲಿಲ್ಲ ಎಂದರೆ ಸರಿ. ಈ ಪ್ರಕರಣದ ಬಗ್ಗೆ ನಾನು ಪೋಲಿಸರ ಎದುರು ಹೇಳಿಕೆ ನೀಡಿರುವುದಿಲ್ಲ. ಅಪಘಾತವಾದ ನಂತರ ಮನೆಯಲ್ಲಿ ಇದ್ದೆವು. ಅಪಘಾತ ಯಾವಾಗ ಆಯಿತು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ಧನ ಬರಬೇಕೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ.

ದಿ:10.02.2020 ರಂದು ಮಧ್ಯಾಹ್ನ 3.45 ಗಂಟೆಗೆ ಸದರಿ ಘಟನೆ ಜರುಗಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಚಾಸಾ-19 ರವರ ತಾಯಿಯಾದ ರತ್ನಾಬಾಯಿ ಹಾಗೂ ಚಾಸಾ-21 ರವರ ಗಂಡನಾದ ದಾಮು ರವರು ಸದರಿ ಟಂಟಂನಲ್ಲಿ ಇದ್ದರು ಎಂದರೆ ಸಾಕ್ಷಿ ರತ್ನಾಬಾಯಿ ಅಲ್ಲೆ ಮೃತಪಟ್ಟಿರುತ್ತಾರೆ ದಾಮು ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ನನ್ನ ಮೊಮ್ಮಗನಾದ ಆದಿತ್ಯ ಸದರಿ ಟಂಟಂನಲ್ಲಿ ಇದ್ದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಚಾಸಾ-8 ರಿಂದ 10, 12 ರಿಂದ 15 ಹಾಗೂ ನಾನು ಆ ವಾಹನದಲ್ಲಿ ಇದ್ದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ನಾನು ಈ ರೀತಿ ಪೋಲಿಸ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ